ವಿದ್ಯಾಭ್ಯಾಸದ ಇಲಾಖೆ.

ತಾರೀಖು 26ನೇ ಮೂಹೆ ಜುಲೈ ಸ್ರ 1887ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಇದರಿಂವ ತಿಳಿಸಲ್ಪಡುವದೇನಂದರೆ—ಮುಂದಿನ ಪರೀಕ್ಷೆಯು 1888ನೇ ಫೆಬ್ರವರೀ ತಿಂಗಳಲ್ಲಿ ಪ್ರತಿ ಡಿಸ್ಟ್ರಿಕ್ಟಿನ ಹೆಡ್ ಕ್ವಾರ್ಟರ್ ಅಂದರೆ ಪ್ರಮುಖ ಸ್ಥಳಗಳಲ್ಲಿ ನಡಿಸಲ್ಪಡುವದು; ಸದರೀ ಪರೀಕ್ಷೆಗಾಗಿ ಈ ಕೆಳಗೆ ನಮೂದಿಸುವ ಬದಲುವಣಿಗಳೊಡನೆ 1886ನೇ ಇಸವಿ ಜುಲೈ ಮೂಹೆ 22ನೇ ತಾರೀಖಿನ ಇಸ್ತಿಹಾರ್‌ನಾಮೆಯಲ್ಲಿನ ರೂಲ್‌ಸುಗಳೂ ಮತ್ತು ಅಂಕಗಳೂ ಅನುಸರಿಸಲ್ಪಡವವು:—

5ನೇ ಪ್ರಕರಣ. I ಆವಶ್ಯಕಭಾಷೆ.

iii ಪರೀಕ್ಷಾಗ್ರಂಥ.....ಜ್ಞಾಪಕಶಕ್ತಿಯಿಂದ 25 ಪಟ್ಟಿಗಳಿಗೆ ಅಧಿಕವಿಲ್ಲದಂತೆ ಬರೆಯುವದು ವಗೈರೆ.

7ನೇ ಪ್ರಕರಣ. ಭಾಷಾ ವಿಷಯಗಳಿಗಾಗಿ ಗೊತ್ತು ಮಾಡಲ್ಪಡುವ ನಂಬರು ಅಂದರೆ ಸಂಖ್ಯೆ ಪೈಕಿ ಪ್ರತಿಬಂದು ಮುಖ್ಯಾಂಶದಲ್ಲಿಯೂ ಅರ್ಧಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಮೂರರಲ್ಲಿ ಎರಡು ಭಾಗಗಳನ್ನೂ ಮತ್ತು ಉಳಿದ ವಿಷಯಗಳಿಗಾಗಿ ಗೊತ್ತು ಮಾಡಲ್ಪಡುವ ಸಂಖ್ಯೆ ಪೈಕಿ ಪ್ರತಿ ಬಂದು ಮುಖ್ಯಾಂಶದಲ್ಲಿಯೂ ಮೂರರಲ್ಲಿ ಬಂದು ಭಾಗಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಅರ್ಧವನ್ನೂ ಪಡೆದಂಥಾವರು ಮೊದಲನೇ ತರಗತಿಯಲ್ಲಿ ಸೇರಿಸಲ್ಪಡುವರು. ಮತ್ತು ಭಾಷೆಯ ವಿಷೆಯಗಳಿಗಾಗಿ ಗೊತ್ತುಮಾಡಲ್ಪಡುವ ಸಂಖ್ಯೆ ಪೈಕಿ ಪ್ರತಿ ಬಂದು ಮುಖ್ಯಾಂಶದಲ್ಲಿಯೂ ಮೂರರಲ್ಲಿ ಬಂದು ಭಾಗಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಎಂಟರಲ್ಲಿ ಮೂರುಭಾಗಗಳನ್ನೂ ಮತ್ತು ಉಳಿದ ವಿಷಯಗಳಿಗಾಗಿ ಗೊತ್ತುಮಾಡಲ್ಪಡುವ ಸಂಖ್ಯೆ ಪೈಕಿ ಪ್ರತಿ ಬಂದು ಮುಖ್ಯಾಂಶದಲ್ಲಿಯೂ ನಾಲ್ಕರಲ್ಲಿ ಬಂದು ಭಾಗವನ್ನೂ ಒಟ್ಟು ಸಂಖ್ಯೆಯ ಮೂರರಲ್ಲಿ ಬಂದು ಭಾಗವನ್ನೂ ಪಡೆದಂಥಾವರು ಎರಡನೇ ತರಗತಿಯಲ್ಲಿ ಸೇರಿಸಲ್ಪಡುವರು.

12ನೇ ಪ್ರಕರಣ. ಪರೀಕ್ಷೆಗೆ ಬರುವವರು ಭಾಷಾ ವಿಷಯದಲ್ಲಿ ಪ್ರತಿ ಬಂದು ಮುಖ್ಯಾಂಶದಲ್ಲಿಯೂ ಅರ್ಧಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಮೂರರಲ್ಲಿ ಎರಡು ಭಾಗಗಳನ್ನೂ ಮತ್ತು ಉಳಿದ ವಿಷಯಗಳ ಪ್ರತಿ ಬಂದು ಮುಖ್ಯಾಂಶದಲ್ಲಿಯೂ ಮೂರರಲ್ಲಿ ಬಂದು ಭಾಗಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಅರ್ಧವನ್ನೂ, ಪಡೆಯಬೇಕು.

ಯಲ್. ರೈಸ್,
ಎಜ್ಯುಕೇಷನ್ ಸೆಕ್ರಿಟರಿ.